KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT :
NAME OF THE NEWS PAPER :
DATE : 22/3/20

# ಲ್ಯಾಪ್‌ಟ್ಯಾಪ್ ಹಗರಣದ ಸದ್ದು ಶಾಸನ ರಚನೆ ಚುರುಕಿನ ಗುದ್ದು

ಬೆಂಗಳೂರು: ವಿಧಾನಸಭೆ ಅಧಿವೇಶನದಲ್ಲಿ ಮೊದಲ ಬಾರಿಗೆ ಸರ್ಕಾರದ ವಿರುದ್ಧ ಹಗರಣವೊಂದು ಇಣುಕಿ ಹಾಕಿತು. ಲ್ಯಾಪ್‌ಟ್ಯಾಪ್ ಖರೀದಿಯಲ್ಲಿ ಅವ್ಯವಹಾರ ಆಗಿದೆ ಎಂಬ ಪ್ರತಿಪಕ್ಷಗಳ ಶಂಕೆ ಅಲ್ಲಿಗೆ ನಿಂತಿತು. ದಡ ಮುಟ್ಟಲಿಲ್ಲ. ಇದನ್ನು ಪ್ರಸ್ತಾಪಿಸಿದ್ದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ. ಬಜೆಟ್ ಮೇಲಿನ ಚರ್ಚೆ ಸಂದರ್ಭದಲ್ಲಿ. 2016–17ರ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟ್ಯಾಪ್ ಕೊಡಲಾಯಿತು. ತಲಾ 14,490 ರೂ. ಪ್ರಕಾರ ಅದನ್ನು ಖರೀದಿಸಲಾಯಿತು. ಆದರೆ 17–18ರಲ್ಲಿ ಅದೇ ಲ್ಯಾಪ್‌ಟ್ಯಾಪ್ ಅನ್ನು 28,320 ರೂ.ಗೆ ಖರೀದಿಸಲಾಯಿತು. ಒಂದಕ್ಕೆ 13,380 ರೂ. ಹೆಚ್ಚುವರಿ ದರದಲ್ಲಿ ಖರೀದಿಸಿರುವುದರ ಹಿಂದೆ ಅವ್ಯವಹಾರ ಇದೆ. ಈ ಬಗ್ಗೆ ತನಿಖೆ ನಡೆಸಬೇಕು ಎಂಬ ಅವರ ಧ್ವನಿಗೆ ಪ್ರತಿಪಕ್ಷ ಧ್ವನಿಗೂಡಿಸಿತು. ಇದೇ ಸಂದರ್ಭದಲ್ಲಿ ಸಚಿವ ಈಶ್ವರಪ್ಪ ಯಾವುದೇ ಸರ್ಕಾರವಿರಲಿ ಹಿಂದುಳಿದ ವರ್ಗಗಳ ಕಲ್ಯಾಣ ಯೋಜನೆ ಅನುಷ್ಠಾನದಲ್ಲಿ ಪ್ರಾಮಾಣಿಕತೆ ಇರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದು ವಿಶೇಷವಾಗಿತ್ತು.

ಬಿಜೆಪಿ ಸರ್ಕಾರ ಬಂದ ನಂತರ ಹಗರಣದ ಮೊದಲ ಆರೋಪವಿದು. ಆದರೆ ಈ ದರವನ್ನು ಹಿಂದಿನ ಸರ್ಕಾರವೇ ನಿಗದಿ ಮಾಡಿತ್ತು ಎಂದು ಆಡಳಿತ ಪಕ್ಷದ ಕೆಲವು ಶಾಸಕರು ಹೇಳಿದ್ದಾರೆ. ಈ ಆರೋಪಕ್ಕೆ ಸರ್ಕಾರದ ಪತಿಯಿಂದ ಉತ್ತರ ಬಂದಿಲ್ಲ. ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೋ, ಉನ್ನತ ಶಿಕ್ಷಣ ಸಚಿವರಿಗೆ ಬಿಡುತ್ತಾರೆ. ಆದರೆ ಪ್ರತಿಪಕ್ಷ ಮತ್ತೊಮ್ಮೆ ನೆನಪಿಸದಿದ್ದರೆ ಸರ್ಕಾರಕ್ಕೆ ಮರೆತು ಹೋಗುತ್ತದೆಯೋ ಗೊತ್ತಿಲ್ಲ.




ವಾರದ ಅಧಿವೇಶನದಲ್ಲಿ ಕೊರೊನದ್ದೇ ಚರ್ಚೆ. ಸೋಂಕು ಹರಡದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪ್ರಯೋಗಾಲಯಗಳ ಸಂಖ್ಯೆ ಹೆಚ್ಚಿಸಬೇಕು ಎನ್ನುವುದು ಶಾಸಕರ ಬೇಡಿಕೆ. ವಿಶೇಷ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಧಾರವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಸದನದಲ್ಲಿ ಪ್ರಕಟಿಸಿದರು. ಇದಕ್ಕೆ ಇಡೀ ಸದನ ಬೆಂಬಲ ನೀಡಿತು. ಕಠಿಣ ನಿರ್ಬಂಧಗಳ ನಡುವೆಯೂ ಅಧಿವೇಶನ ನಡೆಸುತ್ತಿರುವ ಬಗ್ಗೆ ಕಾಂಗ್ರೆಸ್ ಹಿರಿಯ ಮುಖಂಡ ಎಚ್.ಕೆ.ಪಾಟೀಲರಿಂದ ಆಕ್ಷೇಪ. ಸ್ಪೀಕರ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಕೊರೊನಾ ಹಿನ್ನೆಲೆಯಲ್ಲಿ ಸದನದ ಅವಧಿ ಮೊಟಕು ಮಾಡುವ ವಿಷಯ ಸಂಪುಟ ಸಭೆಯಲ್ಲಿಯೂ ಚರ್ಚೆಗೆ ಬಂದಿಲ್ಲ. ಇದಕ್ಕಾಗಿ ಸದನ ಕಲಾಪ ಸಮಿತಿ ಸಭೆ ಸೇರಿಲ್ಲ. ಆದರೆ ಮಂಗಳವಾರ ಅಧಿವೇಶನ ಮುಂದೂಡಲ್ಪಡುತ್ತದೆ ಎಂಬ ಮಾತು ಮೊಗಸಾಲೆಯಲ್ಲಿ ಬಲವಾಗಿದೆ.

ಗಮನ ಸೆಳೆಯುವ ಸೂಚನೆಯಲ್ಲಿ ಅನೇಕ ಮಹತ್ವದ ವಿಷಯಗಳು ಚರ್ಚೆಗೆ ಬಂದವು. ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಕೆಸಿ ವ್ಯಾಲಿ ಯೋಜನೆ ಹೇಗೆ ಕೆಲವು ರೈತರಿಂದ ದುರುಪಯೋಗ ಆಗುತ್ತಿದೆ ಎನ್ನುವುದನ್ನು ಮಾಜಿ ಸ್ಪೀಕರ್ ರಮೇಶ್ ಕುಮಾರ್ ಹಾಗೂ ಮಾಜಿ ಸಚಿವ ಕೃಷ್ಣಬೈರೇಗೌಡ ಸರ್ಕಾರದ ಗಮನಕ್ಕೆ ತಂದರು. ಬೆಂಗಳೂರಿನ ಕೊಳಚೆ ನೀರನ್ನು ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಕೆರೆಗಳಿಗೆ ಸಂಸ್ಕರಿಸಿ ನೀಡುವ ಈ ಮಹತ್ವದ ಯೋಜನೆ ಜಾರಿಯಲ್ಲಿ ಇವರಿಬ್ಬರೂ ಮಹತ್ವದ ಪಾತ್ರ ವಹಿಸಿದವರು. ದುರುಪಯೋಗ ತಡೆಯುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಕಾನೂನು ಸಚಿವ ಜೆಸಿ ಮಾಧುಸ್ವಾಮಿ ಸಮಾಧಾನ ಹೇಳಬೇಕಾಗಿ ಬಂತು.

ಸದನದ ಮುಂದೆ ಹತ್ತಕ್ಕೂ ಹೆಚ್ಚು ವಿಧೇಯಕಗಳಿವೆ. ಈಗಾಗಲೇ ನಾಲ್ಕು ವಿಧೇಯಕಗಳು ಅಂಗೀಕಾರವಾಗಿವೆ. ಹಿಂದಿನ ಕಾಂಗ್ರೆಸ್ ಸರ್ಕಾರದ ಶಿಕ್ಷಕರ ಕಡ್ಡಾಯ ವರ್ಗಾವಣೆಗೆ ತಿದ್ದುಪಡಿ ತರುವ ಮೂಲಕ ಸರ್ಕಾರ ಶಿಕ್ಷಕ ವೃಂದ ಸಮಾಧಾನದಿಂದ ನಿಟ್ಟುಸಿರು ಬಿಡುವಂತೆ ಮಾಡಿದೆ. ಕೈಗಾರಿಕೆಗಳು ರೈತರಿಂದ ಪಡೆದ ಭೂಮಿಯನ್ನು ನಷ್ಟ ಅನುಭವಿಸಿದ ಪಕ್ಷದಲ್ಲಿ ಮಾರಾಟ ಮಾಡಲು ಅವಕಾಶ ನೀಡುವ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ವಿರೋಧ ಪಕ್ಷಗಳ ಸಭಾತ್ಯಾಗದ ನಡುವೆ ಅಂಗೀಕಾರವಾಯಿತು. ಇದು ದಿ. ದೇವರಾಜ ಅರಸು ಅವರು ಜಾರಿಗೆ ತಂದ ಭೂ ಸುಧಾರಣೆ ಕಾಯ್ದೆಯ ಮೂಲ ಆಶಯಕ್ಕೆ ವಿರುದ್ಧ ಎನ್ನುವುದು ಕಾಂಗ್ರೆಸ್ ಆರೋಪ. ಕಾಯ್ದೆಯ ಕಲಂ 109ಕ್ಕೆ ತಿದ್ದುಪಡಿ ತಂದ ಕಾಂಗ್ರೆಸ್ ಸರ್ಕಾರವೇ ಆ ಆಶಯವನ್ನು ಸಾಯಿಸಿ ಬಿಟ್ಟಿತ್ತು ಎನ್ನುವುದು ಬಿಜೆಪಿ ತಿರುಗೇಟು.

ಒಟ್ಟಾರೆ ಕಳೆದ ವಾರದ ಅಧಿವೇಶನದಲ್ಲಿ ಅಬ್ಬರಕ್ಕಿಂತ ಗಂಭೀರ ಚರ್ಚೆ ಗಮನಾರ್ಹವಾಗಿತ್ತು.